ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ರಾಗುಟ್ಟಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ:24.06.16

ಈ ವಾರದ ಮುನ್ಸೂಚನೆ (25.6.16 to 29.6.16 ವರೆಗೆ)

ನಿಯತಾಂಕಗಳು	25.06.16	26.06.16	27.06.16	28.06.16	29.06.16
ಮಳೆ (ಮಿ ಮಿ)	2	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	31	31	29	29	29
ಕನಿಷ್ಠ ಉಷ್ಣಾಂಶ (ಡಿ.ಸೆ.)	20	21	21	21	21
ಮೋಡ (ಪ್ರಮಾಣ)	7	7	5	6	7
ಅರ್ದ್ರತೆ ೭.೨೦ ಬೆ (ಶೇ)	92	90	88	88	81
ಅರ್ದ್ರತೆ ೨.೨೦ ಮ (ಶೇ)	47	46	52	49	48
ಗಾಳಿಯ ವೇಗ (ಕಿ.ಮಿ/ಗಂಟೆಗೆ)	37	40	26	26	27
ಗಾಳಿಯ ದಿಕ್ಕು (ಡಿಗ್ರಿ)	262	265	283	252	255

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ **ರಾಗುಟ್ಟಹಳ್ಳಿ** ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಮೋಡ ಕವಿದ ವಾತಾವರಣವಿದ್ದು ಹಗುರ ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶವು 29–31^{o}C ಮತ್ತು ಕನಿಷ್ಠ 20–21^{o}C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 81-92 % ಇದ್ದು, ಮಧ್ಯಾಹ್ನ 46-52% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 26-40 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ದುರ್ಬಲವಾಗಿರುವ ಮುಂಗಾರು ಮಳೆ ಇರುವುದರಿಂದ ಮುಂಗಾರು ಬಿತ್ತನೆಯನ್ನು ತೇವಾಂಶದ ಆಧಾರದ ಮೇಲೆ ಮುಂದುವರಿಸಿ. ಬಿತ್ತನೆಗೆ ಭೂಮಿಯನ್ನು ಮಟ್ಟಮಾಡಿ ಸಮನಾಗಿರುವಂತೆ ಹದಮಾಡಿ.
- ✓ ಕೃಷಿ ಭೂಮಿಯನ್ನು ಆಳವಾಗಿ ಉಳುಮೆ ಮಾಡಬೇಕು. ಹಾಗೆ ಮಾಡುವುದರಿಂದ ನೀರು ಮಣ್ಣಿನಲ್ಲಿ ಚೆನ್ನಾಗಿ ಹಿಂಗುತ್ತದೆ.
- ✓ ಖುಷ್ಕಿ ಜಮೀನಿನಲ್ಲಿ ಬದುಗಳನ್ನು ಭದ್ರಗೊಳಿಸಬೇಕು, ಸೂಕ್ತ ಬಸಿಗಾಲುವೆಗಳನ್ನು ನಿರ್ಮಿಸಿಕೊಂಡು ನೀರು ನಿಲ್ಲದಂತೆ ನೋಡಿಕೊಳ್ಳಿ
- ✓ ಬಿತ್ತನೆಗೆ ಬೇಕಾದ ಉತ್ತಮ ಗುಣಮಟ್ಟದ ಬೀಜಗಳನ್ನು ಹತ್ತಿರದ ರೈತ ಸಂಪರ್ಕ ಕೇಂದ್ರದಲ್ಲಿ ಖರೀದಿಸಲು ಸೂಚಿಸಲಾಗಿದೆ
- ✓ **ಏಕಬೆಳೆ ಪದ್ಧತಿಯಲ್ಲಿ ಈ ಕೆಳಗಿನ ದೀರ್ಘಾವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**

  ತೊಗರಿ : ಟಿ.ಟಿ.ಬಿ–7, ಬಿ.ಆರ್.ಜಿ–1,2,4ಮತ್ತು 5

  ಹರಳು: ಡಿ.ಸಿ.ಎಸ್–9 (ಜ್ಯೊತಿ), ಡಿ.ಸಿ.ಎಚ್–177 ಮತ್ತು 32
- ✓ **ಎರಡುಬೆಳೆ ಪದ್ಧತಿಯಲ್ಲಿ ಈ ಕೆಳಗಿನ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ.**

  ರಾಗಿ: ಇಂಡಾಫ್–9, ಎಳ್ಳು : ನವಿಲೆ–1, ಟಿ–7, ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1

  ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ

ಜೂನ್‌ನಲ್ಲಿ ಮುಸುಕಿನ ಜೋಳ + ತೊಗರಿ (1:1 ಸಾಲುಗಳ ಪ್ರಮಾಣದಲ್ಲಿ), ನೆಲಗಡಲೆಯಲ್ಲಿ + ತೊಗರಿ ಪ್ರತಿ 8 ಸಾಲಿಗೆ 2 ಸಾಲಿನಂತೆ ಅಂತರ ಬೆಳೆಯಾಗಿ ಹಾಗೂ ರಾಗಿ + ತೊಗರಿ (8:2), ಸುಧಾರಿತ ತಳಿಗಳಾದ ಇಂಡಾಫ್–8 ಅಥವಾ ಎಮ್.ಆರ್–1 ರಾಗಿ ಬೆಳೆಯುವುದು ಸೂಕ್ತ. ದ್ವಿದಳ ಧಾನ್ಯ ಬೆಳೆಗಳನ್ನು ಬಿತ್ತುವ ಮುನ್ನ ಜೈವಿಕ ಗೊಬ್ಬರಗಳಾದ ರೈಜೋಬಿಯಮ್ ನಿಂದ ಬೀಜೋಪಚಾರ ಮಾಡಬೇಕು

ಸಸ್ಯ ಸಂರಕ್ಷಣೆ:

- ✓ ಮುಂದಿನ ಐದು ದಿನಗಳು ಮಳೆ ಬರುವ ಸಂಭವವಿರುವುದರಿಂದ ಔಷಧಿ ಸಿಂಪರಣೆ ಮಾಡದಿರಿಲು ಸೂಚಿಸಲಾಗಿದೆ.

ನೋಡಲ್ ಅಧಿಕಾರಿ:

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು